# ಯೋಗಃ ಕರ್ಮಸು ಕೌಶಲಮ್

ಡಾ. ಇ. ವಸಂತ ಕುಮಾರ್

ಈ ಪ್ರಪಂಚವೇ ಕರ್ಮಭೂಮಿ. ಸಕಲ ಜೀವಿಗಳಿಗೂ ಅನಿವಾರ್ಯವಾದ ಕರ್ಮವನ್ನು ಮಾನವನು ಯೋಗವಾಗಿ ಮಾರ್ಪಡಿಸುವ ಮೂಲಕ, ಅವನು ಕರ್ಮಬಂಧನದಿಂದ ಬಿಡಿಸಿಕೊಂಡು ಮುಕ್ತನಾಗಬಹುದು ಎಂಬುದು ಗೀತೆಯ ಸಂದೇಶ. ಹೀಗೆ ಯೋಗವನ್ನು ಆಚರಿಸುವ ಬಗೆ ಹೇಗೆ ಎಂಬುದನ್ನು ಗೀತೆ ಒಂದೇ ಮಾತಿನಲ್ಲಿ ತಿಳಿಸುತ್ತದೆ. ಈ ಮಾತನ್ನು ವಿಶ್ಲೇಷಿಸುವ ಲೇಖಕರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

'ಯೋಗಃ ಕರ್ಮಸು ಕೌಶಲಮ್' ಎಂಬ ವಾಕ್ಯ ಭಗವದ್ಗೀತೆಯ ೨ನೆ ಅಧ್ಯಾಯ, ಸಾಂಖ್ಯಯೋಗದ ೫೦ನೆಯ ಶ್ಲೋಕದಲ್ಲಿದೆ. ಕರ್ಮ ಕುಶಲತೆಯೇ ಯೋಗ ಎಂಬುದು ಇದರ ಅರ್ಥ. ಗೀತೆಯ ಮೂರನೆ ಅಧ್ಯಾಯ ಕರ್ಮಯೋಗಕ್ಕೆ ಮೀಸಲಾಗಿದ್ದರೂ ಕರ್ಮಯೋಗಕ್ಕೆ ಸಂಬಂಧಪಟ್ಟ ತತ್ತ್ವಗಳು ಇತರ ಅಧ್ಯಾಯಗಳಲ್ಲಿಯೂ ಅಲ್ಲಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. 'ಕರ್ಮ ಕುಶಲತೆಯೇ ಯೋಗ' ಎಂಬುದರಲ್ಲಿ ಕರ್ಮ, ಕೌಶಲ, ಯೋಗ, ಕರ್ಮಯೋಗ – ಇವುಗಳೆಲ್ಲಾ ಸೇರಿವೆ. ಕರ್ಮವೆಂಬುದು ಮೊದಲನೆ ಮೆಟ್ಟಿಲು. ಕರ್ಮಯೋಗವೆಂಬುದು ಕೊನೆಯ ಮೆಟ್ಟಿಲು. ಜೀವಿಗಳು ಕರ್ಮದಿಂದ ಪ್ರಾರಂಭಿಸಿ ಕರ್ಮಯೋಗಕ್ಕೆ ಹಂತಹಂತವಾಗಿ ಸಾಗಬೇಕಾಗಿದೆ. ಕೊನೆಯ ಮೆಟ್ಟಲಿಗೆ ಹಾರಲಾಗುವುದಿಲ್ಲ. ಹಾಗೆ ಮಾಡಿದರೆ, 'ಇದ್ದುದನು ನೀಗಾಡಿ ಉದ್ದನಾ ಮರವೇರಿ ತಲೆಕೆಳಕಾಗಿ ಬಿದ್ದಂತೆ' ಎಂದು ಸರ್ವಜ್ಞ ಕವಿ ಹೇಳಿದಂತಾಗುತ್ತದೆ. ನಾವು ಮೊದಲು ಕರ್ಮದ ಬಗ್ಗೆ ತಿಳಿದುಕೊಳ್ಳಬೇಕು. ಅಷ್ಟೇ ಅಲ್ಲ, ಅದನ್ನು ರೂಢಿಸಬೇಕು. ನಂತರ ಯೋಗವೆಂದರೆ ಏನೆಂಬುದನ್ನು ತಿಳಿಯಬೇಕು. ಆಗ ಕರ್ಮಕೌಶಲ ಎಂದರೇನು, ಅದು ಹೇಗೆ ಯೋಗವಾದೀತು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.



## ಕರ್ಮ

ಕರ್ಮ ಎಂದರೆ ಕೆಲಸ. ಎಲ್ಲರೂ ಕೆಲಸ ಮಾಡುತ್ತಿರುವರು, ಮಾಡದವರೇ ಇಲ್ಲ. ಸೋಮಾರಿಯೂ ಕೆಲಸ ಮಾಡುತ್ತಿರುವನು. ನಿಷ್ಪ್ರಯೋಜಕವಾದುದನ್ನು ಮಾಡುತ್ತಿರುವನೆಂದು ಹಾಗೆ ಕರೆಯುತ್ತೇವೆ. ಕೆಲಸ ಒಂದೇ ಆದರೂ ಅದನ್ನು ಮಾಡುವುದರಲ್ಲಿ ತರತಮವಿದೆ. ಹೇಗೋ ಮಾಡಿದರಾಯಿತು ಎಂಬುದರಿಂದ ಹಿಡಿದು ಅತ್ಯಂತ ಚೆನ್ನಾಗಿ ಮಾಡುವವರೆಗೆ ಅದು ಹಬ್ಬಿದೆ. ಕೆಲಸ ಸಣ್ಣದಾಗಿರಬಹುದು, ದೊಡ್ಡದಾಗಿರಬಹುದು, ಮುಖ್ಯವಾದುದಾಗಿರಬಹುದು, ಅಮುಖ್ಯವಾದುದಾಗಿರಬಹುದು, ಕಸಗುಡಿಸುವುದಾಗಿರಬಹುದು, ಪೂಜೆಯಾಗಿರಬಹುದು – ನಮಗೆ ಸಾಧ್ಯವಾದಂತೆ, ಸಾಧ್ಯವಾದಷ್ಟು ಮಾಡಿದರೆ ಸಾಲದೆ ಎಂದು ನಾವು ಯೋಚಿಸಬಹುದು. ಒಂದು ಕೆಲಸ ಚೆನ್ನಾಗಿ ಆದರೆ ನಮಗೆ ಸಂತೋಷವಾಗುವುದು, ಸಮರ್ಪಕವಾಗಿ ಆಗದಿದ್ದರೆ ಸಮಾಧಾನ ಇರುವುದಿಲ್ಲ. ಇದಕ್ಕೆ ಕಾರಣ, ಕರ್ಮ ನಮ್ಮ ಮನಸ್ಸಿನ ಮೇಲೆ ಪರಿಣಾಮ ಉಂಟುಮಾಡುವುದು. ಪರಿಣಾಮ ನಮ್ಮ ಕೆಲಸದ ಗುಣಮಟ್ಟವನ್ನು ತೋರಿಸುತ್ತದೆ.

## ಕರ್ಮ – ಸ್ವಭಾವ

ಕರ್ಮಕ್ಕೂ ನಮ್ಮ ಸ್ವಭಾವಕ್ಕೂ ಸಂಬಂಧವಿದೆ. ನಮ್ಮ ಸ್ವಭಾವದಂತೆ ಕೆಲಸ ಮಾಡುತ್ತೇವೆ; ಕರ್ಮ ನಮ್ಮ ಸ್ವಭಾವವನ್ನು ರೂಪಿಸು

ತ್ತದೆ. ಒಂದು ಕೆಲಸವನ್ನು ನಿತ್ಯವೂ ಮಾಡಿದರೆ ಅದು ನಮ್ಮ ಅಭ್ಯಾಸವಾಗುವುದು. ಅಭ್ಯಾಸ ಬಲವಾದಂತೆ, ಆ ಕೆಲಸದ ಮರ್ಮ ನಮಗೆ ಗೊತ್ತಾಗುವುದು. ನಾವು ಕರ್ಮಪಟುಗಳಾಗುವೆವು. ಅಭ್ಯಾಸ ಬಲವಾದಂತೆ ಅದು ನಮ್ಮ ಮನಸ್ಸಿನಲ್ಲಿ ಸಂಸ್ಕಾರವನ್ನು ಬಿಡುವುದು. ನಮ್ಮ ಮನಸ್ಸು ಹೀರಿಕೊಂಡ ಆ ಸಂಸ್ಕಾರವೇ ನಮ್ಮ ಸ್ವಭಾವವಾಗುವುದು. ಸ್ವಭಾವದಂತೆ ನಾವು ಕೆಲಸ ಮಾಡುವೆವು. ಆದುದರಿಂದಲೇ ಪ್ರತಿಯೊಂದು ಕೆಲಸವನ್ನೂ ಚೆನ್ನಾಗಿ ಮಾಡಬೇಕು ಎಂಬ ಬುದ್ಧಿಮಾತು ಹಿರಿಯರಿಂದ, ಶಾಸ್ತ್ರಗಳಿಂದ ನಮಗೆ ಬಂದಿರುವುದು.

### ಕರ್ಮದ ಪ್ರಯೋಜನ

ಒಂದು ಕೆಲಸ ಸರಿಯಾಗಿ ಆಗಬೇಕಾದರೆ, ಈ ಮೂರು ಆವಶ್ಯಕ: ಪೂರ್ವಸಿದ್ಧತೆ, ಮುನ್ನೆಚ್ಚರಿಕೆ ಮತ್ತು ಪ್ರಯತ್ನದಲ್ಲಿ ವಿಶ್ವಾಸ. ಊಟ ಮಾಡುವುದಕ್ಕಾಗಲಿ, ಪೂಜೆ ಮಾಡುವುದಕ್ಕಾಗಲಿ ಹಲವು ವಸ್ತುಗಳನ್ನು ಸರಿಯಾದ ಸ್ಥಳದಲ್ಲಿ ಇಟ್ಟು ಅಣಿ ಮಾಡಿಕೊಳ್ಳಬೇಕಾಗುವುದು. ಎಡವಟ್ಟುಗಳಾಗದಂತೆ ಎಚ್ಚರ ವಹಿಸಬೇಕಾಗುವುದು. ಪ್ರಯತ್ನದಲ್ಲಿ ವಿಶ್ವಾಸವಿದ್ದರೆ, ನಾವು ಯತ್ನಿಸುವೆವು. ಎಷ್ಟರ ಮಟ್ಟಿಗೆ ಪ್ರಯತ್ನಿಸಿದರೆ, ಎಂತಹ ಫಲ ದೊರೆಯುವುದು ಎಂಬುದು ತಿಳಿಯುವುದು. ಪ್ರಯತ್ನದ ಬಗ್ಗೆ ವಿಶ್ವಾಸವಿದ್ದರೆ ಪೂರ್ಣ ಯಶಸ್ಸು ಸಾಧ್ಯವಾಗುವುದು. ಕೆಲಸದ ಮೇಲೆ ಮನಸ್ಸಿಟ್ಟು ಮಾಡುವುದರ ಮೊದಲನೆ ಪ್ರಯೋಜನವೆಂದರೆ ಏಕಾಗ್ರತೆ. ಸ್ಥೂಲ ವಸ್ತುಗಳನ್ನು ಕ್ರಮವಾಗಿ ಜೋಡಿಸುವುದು ಸುಲಭ. ಆಲೋಚನೆಗಳನ್ನು ಮನಸ್ಸಿನಲ್ಲಿ ಅಣಿಯಾಗಿ ಇಡುವುದು ಕಷ್ಟ. ಕರ್ಮ ಮಾಡುವುದರಿಂದ ಚಿತ್ತಚಾಂಚಲ್ಯ ಕಡಿಮೆಯಾಗುವುದು. ಶಿಸ್ತಿನಿಂದ ಕರ್ಮ ಮಾಡುವುದು ಧ್ಯಾನಕ್ಕಿಂತ ಸುಲಭ. ಏಕಾಗ್ರತೆಗೆ, ಧ್ಯಾನಕ್ಕೆ ಕರ್ಮ ಒಳ್ಳೆಯ ಸಾಧನ. ಕ್ರಮಬದ್ಧವಾಗಿ ಕೆಲಸ ಮಾಡದವರು ಧ್ಯಾನ ಮಾಡಲಾರರು.

### ಬುದ್ಧಿ – ಮನಸ್ಸು – ಕರ್ಮ

ಕುಶಲತೆಯಿಂದ ಕರ್ಮ ಮಾಡುವವರಿಗೆ ಬೇಕಾದ ಶಿಸ್ತು, ಶ್ರದ್ಧೆ ಮತ್ತು ಪ್ರಾಮಾಣಿಕತೆ ಕರ್ಮದ ಮೇಲಿನ ನಿಷ್ಠೆಯಿಂದ ಬರುವುದು. ಕೆಲಸ ಮಾಡುವುದರಿಂದ ಬುದ್ಧಿ ಮತ್ತು ಮನಸ್ಸಿಗೂ ವ್ಯಾಯಾಮವಾಗುವುದು. ಮಾನಸಿಕ ಆರೋಗ್ಯದೊಂದಿಗೆ ದೈಹಿಕ ಆರೋಗ್ಯವೂ ದೊರೆಯುವುದು. ಆಲೋಚನೆ, ಭಾವನೆ ಮತ್ತು ಕೆಲಸ – ಇವುಗಳ ಸಾಮರಸ್ಯವೇ ಪ್ರಾಮಾಣಿಕತೆ. ಯಾರು ಪ್ರಾಮಾಣಿಕರಲ್ಲವೊ ಅವರು ತಮ್ಮ ಭಾವನೆಗಳನ್ನು, ಆಲೋಚನೆಗಳನ್ನು ಮರೆಮಾಚುವರು, ಕೆಲಸ ಮಾಡುವುದಕ್ಕೆ ಚೌಕಾಶಿ ಮಾಡುವರು, ಇತರರಲ್ಲಿ ಪ್ರಾಮಾಣಿಕತೆಯನ್ನು ನಿರೀಕ್ಷಿಸುವರು. ಪ್ರಾಮಾಣಿಕತೆ ಇಲ್ಲದಿದ್ದರೆ ಸತ್ಯದರ್ಶನ ಸಾಧ್ಯವಿಲ್ಲ. ಸತ್ಯದ ಅನುಭವವಿರಲಿ, ಅದನ್ನು ತಿಳಿಯಲೂ ಅವರಿಗೆ ಸಾಧ್ಯವಾಗುವುದಿಲ್ಲ. ಸತ್ಯವನ್ನರಸುವುದೇ ಆಧ್ಯಾತ್ಮಿಕ ಸಾಧನೆ. ಋಜುಮಾರ್ಗಿಗಳೇ ಇದನ್ನು ಮಾಡುವವರು,

### ಕಾಮ್ಯ ಕರ್ಮ ಮತ್ತು ನಿಯತ ಕರ್ಮ

ನಾವು ಮಾಡುವ ಕೆಲಸಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಒಂದು, ಕಾಮ್ಯ ಕರ್ಮ. ನಮ್ಮ ಆಸೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಮಾಡುವ ಕೆಲಸ. ಹಣ, ಕೀರ್ತಿ, ಅಧಿಕಾರ, ಐಶ್ವರ್ಯ ಮುಂತಾದ ಪ್ರಾಪಂಚಿಕ ಸುಖ ಮತ್ತು ವೈಭವಕ್ಕಾಗಿ ಮಾಡುವ ಕೆಲಸ. ಇದು ನಮ್ಮ ಮನಸ್ಸು, ಬುದ್ಧಿ ಮತ್ತು ಆಯಸ್ಸಿನ ಬಹು ಭಾಗವನ್ನು ಆಕ್ರಮಿಸುವುದು. ದುಃಖ ಸಂಕಟಗಳಿಗೆ ಎಡೆ ಮಾಡಿಕೊಡುವುದು, ಸಂಸಾರದ ಕಡಲಿನ ಆಳಕ್ಕೆ ಒಯ್ಯುವುದು.

ಎರಡನೆಯದು ನಿಯತ ಕರ್ಮ. ಇದು ವಿಧಿಸಲ್ಪಟ್ಟಿದೆ. ಇದನ್ನು ನಮಗೆ ಇಚ್ಛೆ ಇರಲಿ, ಇಲ್ಲದಿರಲಿ ಮಾಡಲೇ ಬೇಕಾಗಿದೆ. ಇದು ನಮ್ಮ ಮುಂದಿರುವ ಕೆಲಸ. ಇದನ್ನು ಬಿಟ್ಟು ಬೇರೆಯದನ್ನು ಮಾಡಲು ಹೊರಟರೆ ನಾವು ಕರ್ತವ್ಯಚ್ಯುತರಾಗಿ ಚಿತ್ತಕ್ಷೋಭೆಗೆ ಒಳಗಾಗುವೆವು. ನಂತರ ಹಿಂತಿರುಗಿ, ಹೆಚ್ಚು ಶ್ರಮದ ಬೆಲೆ ತೆತ್ತು ಅದನ್ನು ಮಾಡಲಾರಂಭಿಸುವೆವು. 'ಮೊದಲೇ ಮಾಡಿದ್ದರೆ ಚೆನ್ನಾಗಿತ್ತು. ಅಂತೂ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ' ಎಂಬ ಪಾಠ ಮನದಟ್ಟಾಗುವುದು. ಸಂಸಾರವನ್ನು ಸೃಷ್ಟಿ ಮಾಡಿರುವೆವು. ಅದರ ಭಾರವನ್ನು ಹೊರಲೇಬೇಕು. ಅದಕ್ಕೆ ಕೊಡಬೇಕಾದುದನ್ನೆಲ್ಲಾ ತೆರಲೇಬೇಕು. ನಾವು ಒಂದು ಕೋರ್ಸ್‌ಗೆ ಸೇರಿಕೊಂಡರೆ ಪರೀಕ್ಷೆ ಬರೆಯುವುದಿಲ್ಲ ಎಂದು ಹೇಳಲಾಗದು. ಇಲ್ಲದಿದ್ದರೆ ನಮಗೆ ಸರ್ಟಿಫಿಕೇಟ್ ಸಿಕ್ಕುವುದಿಲ್ಲ. ನಿಯತ ಕರ್ಮ ಕೆಲವು ವೇಳೆ ಕಹಿಯಾದುದಾದರೂ ಮಾಡಲೇ ಬೇಕಾಗುವುದು. ಅರ್ಜುನ ಯುದ್ಧ ಮಾಡಲಾರೆ ಎನ್ನಲಾಗದು. ಅವನು ಕ್ಷತ್ರಿಯನಾದುದರಿಂದ, ಅವನ ಧರ್ಮದಂತೆ ಯುದ್ಧ ಮಾಡಲೇ ಬೇಕು. ಉಪಾಧ್ಯಾಯರು ಪಾಠ ಮಾಡುವುದಲ್ಲದೆ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡಬೇಕು. ಇದು ನಿಷ್ಠುರದ ಕೆಲಸ. ತಪ್ಪು ಉತ್ತರಗಳಿಗೆ ನಿಷ್ಪಕ್ಷಪಾತ ಶಸ್ತ್ರಚಿಕಿತ್ಸಕನಂತೆ ನಿರ್ದಾಕ್ಷಿಣ್ಯವಾಗಿ ಅಂಕಗಳನ್ನು ಕತ್ತರಿಸಬೇಕಾಗುತ್ತದೆ. ಅಕರ್ಮ ಮತ್ತು ನಿಯತ ಕರ್ಮದ ಬಗ್ಗೆ ಶ್ರೀಕೃಷ್ಣ ಗೀತೆಯಲ್ಲಿ ಹೀಗೆ ಹೇಳಿದ್ದಾನೆ :

**ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।**
**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥** *(ಗೀತೆ: ೩, ೪)*

'ಕರ್ಮಗಳನ್ನು ಆರಂಭಿಸದೇ ಇರುವುದರಿಂದ ಮನುಷ್ಯನು ನೈಷ್ಕರ್ಮ್ಯವನ್ನು ಹೊಂದುವುದಿಲ್ಲ ಮತ್ತು ಬರಿಯ ಕರ್ಮತ್ಯಾಗದಿಂದಲೇ ಸಿದ್ಧಿಯನ್ನು ಹೊಂದುವುದಿಲ್ಲ.'

**ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।**
**ಶರೀರಯಾತ್ರಾಽಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥**

*(ಗೀತೆ: ೩, ೮)*

‘ನಿತ್ಯಕರ್ಮವನ್ನು ಮಾಡು. ಏಕೆಂದರೆ ಅಕರ್ಮಕ್ಕಿಂತ ಕರ್ಮ ಉತ್ತಮ. ಕರ್ಮವನ್ನು ಮಾಡದೇ ಇರುವುದರಿಂದ ನಿನಗೆ ಜೀವನ ಯಾತ್ರೆಯೂ ಸಾಧ್ಯವಾಗಲಾರದು.’

### ಕರ್ಮಬಂಧನ

ಕೆಲಸಗಳನ್ನು ಮಾಡುತ್ತಾ ಮಾಡುತ್ತಾ ನಾವು ಕರ್ಮಜಾಲದಲ್ಲಿ ಬಂಧಿಗಳಾಗುವೆವು. ಒಂದು ಕರ್ಮ ಮತ್ತೊಂದಕ್ಕೆ ಕಾರಣವಾಗುವುದರಿಂದ ನಮಗೆ ಬೇಜಾರಾಗಿ ಕೆಲಸ ಮಾಡುವುದೇ ಬೇಡ, ಅದು ಕರ್ತವ್ಯ ಕರ್ಮವಾದರೂ ಸರಿಯೆ ಎಂದು ಭಾವಿಸುವೆವು. ಒಂದು ಕೆಲಸವನ್ನು ಪ್ರಾರಂಭಿಸಿದರಲ್ಲವೇ ಅದು ಮತ್ತೊಂದಕ್ಕೆ ನಮ್ಮನ್ನು ಗಂಟು ಹಾಕುವುದು? ಆದ್ದರಿಂದ ನಾವು ಅದನ್ನು ಪ್ರಾರಂಭಿಸುವುದೇ ಬೇಡ ಎಂದುಕೊಳ್ಳುವೆವು. ನಮ್ಮ ಕೆಲಸಗಳಿಗೆ ಪ್ರೇರಣೆ ಆಸೆ. ಅದು ನಮ್ಮನ್ನು ಸುಮ್ಮನಿರಲು ಬಿಡುವುದಿಲ್ಲ. ನಮಗಿರುವುದು ಆಸೆಯಲ್ಲ, ಆಸೆಗಳ ಸರಮಾಲೆ. ಬಂಧನ ಕರ್ಮದಿಂದಲ್ಲ, ನಮ್ಮ ಆಸೆಗಳ ಸುಳಿಯಿಂದ. ನಾವು ಕರ್ಮದಿಂದ ಅಕರ್ಮದೆಡೆಗೆ ಸಾಗಬೇಕಾಗಿದೆ. ಆದರೆ ದಾರಿ, ಕರ್ಮವನ್ನು ಮಾಡದೆ ತಪ್ಪಿಸಿಕೊಳ್ಳುವುದರಿಂದ ಅಲ್ಲ. ಅದರ ಕೆಸರಿನಲ್ಲಿ ಬಿದ್ದು ಅನುಭವ ಗಳಿಸಿ ಅದರಿಂದ ಮೇಲೆ ಬರುವುದರಿಂದ.

### ಕರ್ಮಫಲ

ಪ್ರತಿಯೊಂದು ಕರ್ಮಕ್ಕೂ ಒಂದು ಫಲವಿದೆ, ಅದು ಕಾಮ್ಯಕರ್ಮವಾಗಲಿ, ನಿಯತಕರ್ಮವಾಗಲಿ. ಇದು ಕಾರ್ಯ-ಕಾರಣ ಸಂಬಂಧದಂತೆ. ಕರ್ಮ ಮತ್ತು ಅದರ ಪರಿಣಾಮವನ್ನು ಬೇರ್ಪಡಿಸಲಾಗುವುದಿಲ್ಲ. ಕರ್ಮಫಲಕ್ಕೂ ನಾವು ಕರ್ಮ ಎಂದು ಹೇಳುವುದುಂಟು. ನಮ್ಮ ಕರ್ಮವನ್ನು ಅನುಭವಿಸುತ್ತಿದ್ದೇವೆ ಎಂದು ಹೇಳುವುದುಂಟು. ಒಂದು ಕರ್ಮವನ್ನು ಮಾಡಿ ಅದರ ಪರಿಣಾಮದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಕರ್ಮ ಸಿದ್ಧಾಂತವೆನ್ನುವುದು ಒಂದು ಗಾಢ ನಿಯಮ. ಇದನ್ನು ಸರಿಯಾಗಿ ತಿಳಿದುಕೊಂಡರೆ ನಾವು ಕರ್ಮವನ್ನು ಹೇಗೆ ಮಾಡಬಹುದು, ಹೇಗೆ ಮಾಡಬಾರದು ಎಂಬುದು ತಿಳಿಯುವುದು. ಆದರೆ, ಮಾನವನ ಹಣೆಬರೆಹವೆಂದರೆ, ಯಾವ ಕರ್ಮಕ್ಕೆ ಯಾವ ಫಲ ಬರುವುದು ಮತ್ತು ಯಾವಾಗ ಬರುವುದು ಎನ್ನುವುದು ಮುಂಚೆಯೇ ತಿಳಿಯುವುದಿಲ್ಲ. ಅನೇಕ ವೇಳೆ ಫಲ ಅನುಭವಿಸುತ್ತಿರುತ್ತೇವೆ, ಆದರೆ ಅದು ಯಾವ ಕರ್ಮದ ಫಲ ಎನ್ನುವುದು ತಿಳಿಯದಾಗಿರುತ್ತದೆ. ಫಲ ಸಿಹಿಯಾಗಿದ್ದರೆ, ನಾವು ಯಾವುದೋ ಪುಣ್ಯ ಕಾರ್ಯ ಮಾಡಿರಬೇಕು ಎನ್ನುತ್ತಾ ಸಂತೋಷದಿಂದ ಅದನ್ನು ಅನುಭವಿಸುವೆವು. ಫಲ ಕಹಿಯಾಗಿದ್ದು ಅದರ ಯಾತನೆ ಹೆಚ್ಚಾದಾಗ, ನಾವು ಯಾವಾಗ ಯಾವ ಪಾಪವನ್ನು ಮಾಡಿದ್ದೆವೋ ಅದರ ಫಲವನ್ನು ಈಗ ಅನುಭವಿಸುತ್ತಿದ್ದೇವೆ ಎಂದು ದುಃಖಪಡುವೆವು. ಇದನ್ನು ಅರ್ಥ ಮಾಡಿಕೊಳ್ಳಲಾರದೆ ಒಂದಾದಮೇಲೊಂದರಂತೆ ಬರುವ ಸುಖ-ದುಃಖಗಳನ್ನು ಅನುಭವಿಸುತ್ತಾ ನಮ್ಮ ಜೀವನ ಕಳೆದುಹೋಗುವುದು.

### ಪರಿಣಾಮ ಗೊತ್ತು, ಕಾರಣ ಗೊತ್ತಿಲ್ಲ

ಸುಖ-ದುಃಖ, ಪಾಪ-ಪುಣ್ಯ, ಜನನ-ಮರಣ ಇವನ್ನು ದ್ವಂದ್ವಗಳೆಂದು ಕರೆಯುತ್ತಾರೆ. ಕಾರಣ, ಒಂದು ಇದ್ದರೆ ಇನ್ನೊಂದು ಇರಬೇಕಾಗುತ್ತದೆ. ಒಂದೇ ಒಂದು ಇರಲಾರದು. ಒಂದು ಇದ್ದರೆ ಮತ್ತೊಂದು ನಮಗೆ ಅರ್ಥವಾಗುವುದು. ಕತ್ತಲೆಯ ಪ್ರಜ್ಞೆ ಇರುವುದರಿಂದಲೇ ಬೆಳಕಿನ ಪ್ರಜ್ಞೆ ನಮಗಿರುವುದು. ಎರಡೂ ಒಟ್ಟಿಗೆ ಹೋಗುವುವು ಅಥವಾ ಇರುವುವು. ಯಾರಲ್ಲಿ ಜ್ಞಾನವಿರುವುದೊ ಅವರಲ್ಲಿ ಅಜ್ಞಾನವೂ ಇರುವುದು ಎಂದು ಶ್ರೀರಾಮಕೃಷ್ಣರು ವಿವರಿಸುತ್ತಿದ್ದರು. ಸುಖ-ದುಃಖಗಳು ನಾಣ್ಯದ ಎರಡು ಮುಖಗಳಂತೆ. ಹಾಗೆಯೇ ಜನನ-ಮರಣಗಳೂ ಕೂಡ. ಆದರೆ ಇದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಜನನವಾದರೆ ಸಂತೋಷಪಡುತ್ತೇವೆ. ಮರಣವೆಂದರೆ ಭಯ ಮತ್ತು ದುಃಖ. ಕೆಲವು ವೇಳೆ ಏತಕ್ಕಾದರೂ ಹುಟ್ಟಿದೆವೊ ಎಂದು ಪ್ರಲಾಪಿಸುತ್ತೇವೆ. ಜೀವನ ಅಸಹನೀಯವಾದಾಗ ಮರಣ ಬರಬಾರದೇ ಎಂದು ಪರಿತಪಿಸುತ್ತೇವೆ.

ಕೆಟ್ಟವರು ಪ್ರವರ್ಧಮಾನಕ್ಕೆ ಬರುತ್ತಿರುವುದು, ಒಳ್ಳೆಯವರಿಗೆ ಕೆಡುಕಾಗುತ್ತಿರುವುದು – ಬಿಡಿಸಲಾಗದ ಒಗಟಿನಂತಿದೆ. ಆಟವಾಡುವ ಮಕ್ಕಳು ಭಗವದ್ಗೀತೆಯನ್ನು ಎಲ್ಲಿಂದ ಪ್ರಾರಂಭಿಸಿದರೂ ಅಲ್ಲಿಂದ ಮುಂದಕ್ಕೆ ಕೊನೆಯವರೆಗೆ ಲೀಲಾಜಾಲವಾಗಿ ಹೇಳುವುದನ್ನು ನೋಡಿದಾಗ ಇಂತಹ ಶಕ್ತಿ ಅವರಿಗೆ ಹೇಗೆ ಬಂದಿತೆಂದು ವಿಸ್ಮಯ ಪಡುತ್ತೇವೆ. ಪುಟ್ಟ ಮಕ್ಕಳು ಎಂತಹ ದೊಡ್ಡ ಸಂಖ್ಯೆಯನ್ನಾದರೂ ಮತ್ತೊಂದು ದೊಡ್ಡ ಸಂಖ್ಯೆಯಿಂದ ಗುಣಿಸಿ ಉತ್ತರವನ್ನು ಹಿಂದುಮುಂದಾಗಿ ಹೇಳುವುದನ್ನು ನೋಡಿದಾಗ ಅವಾಕ್ಕಾಗುವೆವು.

ಕರ್ಮ ಮತ್ತು ಕರ್ಮಫಲದ ಕಾರ್ಯ-ಕಾರಣ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಮತ್ತೊಂದು ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳಬೇಕಾಗುವುದು. ಅದೇ ಪುನರ್ಜನ್ಮ ಸಿದ್ಧಾಂತ. ಇದು ಈ ಲೇಖನದ ವಿಷಯವ್ಯಾಪ್ತಿಗೆ ನೇರವಾಗಿ ಸಂಬಂಧಿಸದಿದ್ದರೂ ಅದನ್ನು ತಿಳಿಸದಿದ್ದರೆ ಕರ್ಮನಿಯಮದ ವಿವರಣೆ ಅಪೂರ್ಣವಾಗುತ್ತದೆ.

### ಕರ್ಮ ನಿಯಮ ಮತ್ತು ಪುನರ್ಜನ್ಮ ಸಿದ್ಧಾಂತ

ಕರ್ಮ ನಿಯಮ ಮತ್ತು ಪುನರ್ಜನ್ಮ ಸಿದ್ಧಾಂತವೂ ಕೂಡ ನಾಣ್ಯದ ಎರಡು ಮುಖಗಳಂತೆ! ಒಂದನ್ನು ತಿಳಿಯದೆ ಮತ್ತೊಂದನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಹೆಚ್ಚು ವಿವರಣೆಯ ಅಗತ್ಯವಿಲ್ಲ. ಸಂಕ್ಷೇಪವಾಗಿ ತಿಳಿಸಬಹುದು. ಇದರಲ್ಲಿ ಎಲ್ಲರಿಗೂ ನಂಬಿಕೆ ಇದೆ. ಮಾಡಬಾರದುದನ್ನು ಮಾಡಿ ಅದರ ಪರಿಣಾಮದಿಂದ ತಪ್ಪಿಸಿಕೊಳ್ಳಲು ಯತ್ನಿಸುವವರು ಇದಕ್ಕೆ ವಿರೋಧವಾಗಿ

ಮಾತನಾಡುವರು. ತತ್ತ್ವ, ಸಿದ್ಧಾಂತ, ನಿಯಮಗಳನ್ನು ನಾವು ನಂಬದಿದ್ದರೆ ಅವು ಗೈರುಹಾಜರಾಗುವುದಿಲ್ಲ. ಭೌತಶಾಸ್ತ್ರದ ಪ್ರೊಫೆಸರು ಮತ್ತು ಅದರಲ್ಲಿ ಅಜ್ಞನಾದವನು ಇಬ್ಬರೂ ಎತ್ತರದಿಂದ ಹಾರಿಬಿದ್ದರೆ ಇಬ್ಬರಿಗೂ ಪರಿಣಾಮ ಒಂದೇ! ಭೂಮಿಯ ಗುರುತ್ವಾಕರ್ಷಣ ಶಕ್ತಿ ತನ್ನ ಕೆಲಸವನ್ನು ಮಾಡುವುದು!

ಪುನರ್ಜನ್ಮ ಸಿದ್ಧಾಂತವನ್ನು ನಾವು ಪರಿಗಣಿಸದಿದ್ದರೆ, ಮೇಲೆ ತಿಳಿಸಿದ ಘಟನೆಗಳಿಗೆ ತಾರ್ಕಿಕ ವಿವರಣೆ ಕೊಡಲಾಗುವುದಿಲ್ಲ. ಒಂದೇ ಜನ್ಮದ ಆಧಾರದ ಮೇಲೆ ವಿವರಿಸುವುದಾದರೆ, ಯಾರು ಯಾವ ಕರ್ಮವನ್ನಾದರೂ ಮಾಡಿ ಮೃತರಾದರೆ ಅದರ ಪರಿಣಾಮದಿಂದ ಪಾರಾಗಬಹುದು. ಮಾನವ ಉದ್ಧಾರವಾಗುವುದಕ್ಕೆ ಸಾಧ್ಯವೇ ಇಲ್ಲ ಎಂದಂತಾಗುವುದು. ಇದು ವಿಕಾಸವಾದಕ್ಕೆ ವಿರೋಧವಾಗುವುದು. ಪುನರ್ಜನ್ಮವನ್ನು ನಂಬದ ಧರ್ಮಗಳು ವಿರೋಧಾಭಾಸಕ್ಕೆ ಗುರಿಯಾಗುವುವು. ಹಿಂದೂಧರ್ಮವೊಂದೇ ಬಲವಾದ ತಾತ್ತ್ವಿಕ ಮತ್ತು ತರ್ಕಬದ್ಧವಾದ ತಳಹದಿಯನ್ನು ಹೊಂದಿರುವುದು. ತರ್ಕಶಾಸ್ತ್ರದಲ್ಲಿ ಲಾಜಿಕ್ ಆಫ್ ನೆಸೆಸಿಟಿ (ತಾರ್ಕಿಕ ಆವಶ್ಯಕತೆ) ಎಂಬುದೊಂದಿದೆ. ಕೆಲವನ್ನು ಒಪ್ಪಿಕೊಳ್ಳದಿದ್ದರೆ ವಿರೋಧಾಭಾಸವಾಗುವುದು. ಆಧಾರರಹಿತವಾದರೂ ಅದನ್ನು ಪ್ರಾರಂಭದಲ್ಲಿ ಒಪ್ಪಿಕೊಂಡು ನಂತರ ಇತರ ಸಂದರ್ಭಗಳಲ್ಲಿ ಅದನ್ನು ಪರೀಕ್ಷಿಸಲಾಗುವುದು. ಆಗ ಸತ್ಯವಲ್ಲದ ಅಂಶಕ್ಕೆ ಅದು ಕೊಂಡೊಯ್ದರೆ ಅದನ್ನು ನಿರಾಕರಿಸಬಹುದು. ಇಲ್ಲದಿದ್ದರೆ ನಾವು ಒಪ್ಪಿಕೊಂಡುದು ಸರಿ ಎಂದು ಅರ್ಥ. ಆದರೆ ಪ್ರಾರಂಭದಲ್ಲಿಯೇ ಅದಕ್ಕೆ ಪ್ರಮಾಣ ಒದಗಿಸಲಾಗುವುದಿಲ್ಲ, ಅಷ್ಟೆ. ಇದು, ದೊಡ್ಡವರು ಮಕ್ಕಳಿಗೆ ದೇವರಿಗೆ ನಮಸ್ಕರಿಸು ಎಂದು ಹೇಳಿದಾಗ, ದೇವರಿರುವುದನ್ನು ಮೊದಲು ತೋರಿಸು ಎಂದು ಅವು ಹೇಳಿದಂತಾಗುತ್ತದೆ.

ಸೊನ್ನೆಯಿಂದ ಯಾವ ಸಂಖ್ಯೆಯನ್ನೂ ಭಾಗಿಸಲಾಗುವುದಿಲ್ಲ. ಇದನ್ನು ಪ್ರಮಾಣವಿಲ್ಲದೆ ಒಪ್ಪಿಕೊಳ್ಳಬೇಕು. ಅಲ್ಲದಿದ್ದರೆ, ಯಾವುದೇ ಸಂಖ್ಯೆ ಯಾವುದೇ ಸಂಖ್ಯೆಗೆ ಸಮ ಎಂದು ತೋರಿಸಬಹುದು. ಇದು ತಪ್ಪು. ಆದ್ದರಿಂದ ನಾವು ಒಪ್ಪಿಕೊಂಡುದು ಸರಿ. ಇಂತಹ ಉದಾಹರಣೆಯನ್ನು ಆಧುನಿಕ ವಿಜ್ಞಾನ-ಶಿಕ್ಷಣವನ್ನು ಪಡೆದಿರುವ ಯುವಕರಿಗೆ ಕೊಟ್ಟರೆ ತಕ್ಷಣವೇ ಅವರು ಪುನರ್ಜನ್ಮ ಸಿದ್ಧಾಂತವನ್ನು ಒಪ್ಪಿಕೊಳ್ಳುವರು. ಈ ಸಿದ್ಧಾಂತದ ಬಗ್ಗೆ ಇಚ್ಛೆಯುಳ್ಳವರು, ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ಯೋಗಿವರ್ಯರೂ ಆದ ಸ್ವಾಮಿ ಅಭೇದಾನಂದರ 'ಪುನರ್ಜನ್ಮ' ಎಂಬ ಕಿರುಹೊತ್ತಿಗೆಯನ್ನು ನೋಡಬಹುದು. ಇದು, ಅವರು ನೂರು ವರ್ಷಗಳಿಗೂ ಮುಂಚೆ ಅಮೆರಿಕಾದ ವಿಶ್ವವಿದ್ಯಾನಿಲಯವೊಂದರಲ್ಲಿ ಪ್ರತಿಷ್ಠಿತ ವಿಜ್ಞಾನ ಪ್ರಾಧ್ಯಾಪಕರ ಮುಂದೆ ಕೊಟ್ಟ ಉಪನ್ಯಾಸವಾಗಿದೆ. ಇದಲ್ಲದೆ, ಸ್ವಾಮಿ ಸೋಮನಾಥಾನಂದರ 'ಹಿಂದೂದರ್ಶನ' ಎಂಬ ಪುಟ್ಟ ಪುಸ್ತಕದಲ್ಲಿಯೂ ಈ ಸಿದ್ಧಾಂತದ ಸರಳ ವಿವರಣೆಯನ್ನು ನೋಡಬಹುದು.

### ಯೋಗ

ಇತ್ತೀಚಿನ ದಿನಗಳಲ್ಲಿ ಯೋಗ ಎಂಬ ಪದ ಜನಪ್ರಿಯವಾಗಿದೆ. ಒಂದು ಕಾಲಿನ ಮೇಲೆ ದಿನಗಟ್ಟಲೆ ನಿಲ್ಲುವುದು, ಜೀವಸಹಿತ ನೆಲದಲ್ಲಿ ಹೂಳಿಸಿಕೊಳ್ಳುವುದು, ನೀರಿನ ಮೇಲೆ ನಡೆಯುವುದು, ಬರಿಗೈಯಿಂದ ವಸ್ತುಗಳನ್ನು ಬರಿಸುವುದು, ಗಾಜನ್ನು ತಿನ್ನುವುದು ಮುಂತಾದುವನ್ನೆಲ್ಲಾ ಯೋಗ ಎಂದು ಕರೆಯಲಾಗುತ್ತಿದೆ. ಯೋಗ ಎಂಬ ಪದದ ಸರಳವಾದ ಅರ್ಥ, ಒಂದುಗೂಡಿಸುವುದು ಎಂದು. ಜೀವಾತ್ಮನನ್ನು ಪರಮಾತ್ಮನೊಂದಿಗೆ ಒಂದುಗೂಡಿಸುವುದು. ಇದನ್ನೇ ನಾವು ಮುಕ್ತಿ ಎಂದು ಕರೆಯುವುದು. ನಾವೀಗ ವಿಯೋಗದಲ್ಲಿರುವೆವು. ಭಗವಂತನನ್ನು ಮುಟ್ಟಿದಾಗಲೆ ಜನನ-ಮರಣದ ಮೂಲಕ ಪ್ರಪಂಚಕ್ಕೆ ನಾವು ಬಂದು ಹೋಗುವ ಅವಿರತ ಯಾತ್ರೆ ಕೊನೆಗೊಳ್ಳುವುದು. ಇದಕ್ಕೆ ನಾಲ್ಕು ಮಾರ್ಗ(ಯೋಗ)ಗಳಿವೆ. ಅವೇ ಜ್ಞಾನಯೋಗ, ರಾಜಯೋಗ, ಕರ್ಮಯೋಗ ಮತ್ತು ಭಕ್ತಿಯೋಗ ಎಂಬುವು. ಜ್ಞಾನಯೋಗ ವಿಚಾರ-ವಿವೇಕ ಪ್ರಧಾನ ಮಾರ್ಗ. ರಾಜಯೋಗ ಮನೋಏಕಾಗ್ರತೆಯ ಮಾರ್ಗ. ಕರ್ಮಯೋಗ ನಿಸ್ವಾರ್ಥ ಕರ್ಮದ ಮಾರ್ಗ. ಭಕ್ತಿಯೋಗ, ಪ್ರೀತಿಯ ಮಾರ್ಗ. ವಿಚಾರ, ಏಕಾಗ್ರತೆ, ಕರ್ಮ, ಪ್ರೀತಿ – ಎಲ್ಲವೂ ನಮ್ಮಲ್ಲಿ ಸಹಜವಾಗಿ ಇವೆ. ಕೆಲವರಲ್ಲಿ ವಿಚಾರ ಮುಂದು ಉಳಿದವು ಹಿಂದು. ಕೆಲವರಲ್ಲಿ ಪ್ರೀತಿ ಹೆಚ್ಚು, ಉಳಿದವು ಕಡಿಮೆ. ನಮ್ಮ ಸ್ವಭಾವಕ್ಕೆ ಅನುಗುಣವಾದ ಮಾರ್ಗವನ್ನು ನಾವು ಆರಿಸಿಕೊಳ್ಳಬಹುದು. ಒಂದು ಮೇಲಲ್ಲ, ಒಂದು ಕೀಳಲ್ಲ. ಯಾವ ಒಂದು ಮಾರ್ಗವನ್ನು ಅನುಸರಿಸಿದರೂ ಇತರ ಮಾರ್ಗಗಳ ಫಲ ಬರುವುದು. ಜ್ಞಾನ ಮಾರ್ಗದ ಸಾಧಕರಿಗೆ ಏಕಾಗ್ರತೆ, ನಿಸ್ವಾರ್ಥ ಕರ್ಮ ಮತ್ತು ಭಕ್ತಿ ದೊರಕುವುವು. ನಿಸ್ವಾರ್ಥ ಕರ್ಮ ಮಾಡುವವನಿಗೆ ಏಕಾಗ್ರತೆ, ಜ್ಞಾನ, ಭಕ್ತಿಗಳು ಪ್ರಾಪ್ತವಾಗುತ್ತವೆ. **'ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ'** ಎಲ್ಲಾ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಯನ್ನು ಹೊಂದುತ್ತದೆ ಎಂದು ಶ್ರೀಕೃಷ್ಣ ಹೇಳಿದ್ದಾನೆ. *(ಗೀತೆ: ೪, ೩೩.)* ಅದರಂತೆಯೇ ಇತರ ಯೋಗಗಳ ಸಾಧಕರಿಗೂ ಕೂಡ. ಆದ್ದರಿಂದ ಈ ಮಾರ್ಗಗಳಲ್ಲಿ ಯಾವುದಾದರೂ ಒಂದು ಅಥವಾ ಎರಡು ಅಥವಾ ಎಲ್ಲಾ ಮಾರ್ಗಗಳ ಸಂಯೋಗದಿಂದ ಗುರಿಯನ್ನು ಸೇರಬಹುದು. ಮುಕ್ತರಾಗುವುದು ಮುಖ್ಯ. ದೈವತ್ವ ಎಲ್ಲರಲ್ಲಿಯೂ ಇದೆ. ನಾವೆಲ್ಲ ಭಗವಂತನಿಂದ ಬಂದವರು. ಅವನೆಡೆಗೆ ಹೋಗಬೇಕಾಗಿದೆ. ಆಗಲೆ ನಮ್ಮ ಬಂಧನಗಳು ಕಳಚಬೇಕಾದರೆ, ನಮ್ಮ ಯಾತ್ರೆ ಪೂರ್ಣವಾಗಬೇಕಾದರೆ. ದೈವತ್ವ ನಮ್ಮಲ್ಲಿ ಸುಪ್ತವಾಗಿದೆ. ಅದು ಜಾಗೃತವಾಗಬೇಕಾದರೆ, ನಾವು ಸಾಧನೆ ಮಾಡಬೇಕು. ಈ ನಾಲ್ಕು ಯೋಗಗಳು ಸಾಧನೆಯ ಮಾರ್ಗಗಳು. ವಿವಿಧ ಮಾರ್ಗಗಳಿಂದ ಒಂದೇ ಗುರಿಯನ್ನು ನಾವು ಸೇರಬಹುದು ಎಂಬುದು ವೇದಾಂತ ಧರ್ಮದಲ್ಲಿನ

ಮಹೋನ್ನತ ಸಂದೇಶ ಎಂದು ಸ್ವಾಮಿ ವಿವೇಕಾನಂದರು ಕರ್ಮ ಯೋಗದ ಪ್ರವಚನವೊಂದರಲ್ಲಿ ಹೇಳಿದ್ದಾರೆ,

## ಕರ್ಮಯೋಗ

ಕರ್ಮವನ್ನು ಕರ್ಮಯೋಗವನ್ನಾಗಿ ಮಾಡುವುದು ಹೇಗೆ ಎಂಬುದೇ ಕರ್ಮಯೋಗದ ವಿಷಯವಸ್ತು. ಕರ್ಮದ ಮೂಲ ಕವೇ ಮುಕ್ತರಾಗಬಹುದು ಎಂದು ಈ ಯೋಗ ಹೇಳುವುದು. ನಾವು ಮಾಡುವ ಕೆಲಸ ಯಾವುದೇ ಕರ್ಮಕ್ಷೇತ್ರಕ್ಕೆ ಸೇರಿರಲಿ, ಅದರಿಂದಲೇ ನಾವು ಭಗವಂತನನ್ನು ಮುಟ್ಟಬಹುದು. ಇರುವ ಕೆಲಸವನ್ನು ಬಿಟ್ಟು ಯಾವ ವಿಶೇಷವಾದ ಇತರ ಕೆಲಸವನ್ನು ನಾವು ಮಾಡಬೇಕಾಗಿಲ್ಲ. ಮತ್ತಾವ ಸಿದ್ಧಾಂತವನ್ನೂ ನಂಬಬೇಕಾಗಿಲ್ಲ. ದೇವರಿರುವನು ಎಂದೂ ನಂಬಬೇಕಾಗಿಲ್ಲ. ಇರುವ ಕೆಲಸವನ್ನು ಮಾಡಬೇಕು, ಚೆನ್ನಾಗಿ ಮಾಡಬೇಕು, ಎಷ್ಟು ಚೆನ್ನಾಗಿ ಮಾಡಲು ಸಾಧ್ಯವೋ ಅಷ್ಟು ಚೆನ್ನಾಗಿ ಮಾಡಬೇಕು. ಶ್ರದ್ಧೆಯಿಂದ ಮಾಡ ಬೇಕು. ಕುಶಲತೆಯಿಂದ ಮಾಡಬೇಕು. 'ಕುಶಲತೆ' ಎಂದರೆ ಕೇವಲ ಅತ್ಯಂತ ಚೆನ್ನಾಗಿ ಮಾಡುವುದೆಂದಲ್ಲ. ಕರ್ಮಕುಶಲಿಗಳು ಎಲ್ಲಾ ಕರ್ಮಕ್ಷೇತ್ರಗಳಲ್ಲಿಯೂ ಇರುವರು. ಕುಶಲತೆ ಎಂದರೆ ಇದಲ್ಲ. ಕರ್ಮವನ್ನು ಮಾಡಬೇಕು, ಆದರೆ ಅದರ ಬಂಧನಕ್ಕೆ ಒಳಗಾಗದೆ ಅದರಿಂದ ಪಾರಾಗಬೇಕು. ಕರ್ಮದ ಸರಪಳಿಗೆ ಸಿಕ್ಕದೆ ಜನನ ಮರಣಗಳಿಗೆ ಅತೀತರಾಗಿ ಹೋಗಬೇಕು. ಅನೇಕ ವೇಳೆ ಹೆಚ್ಚು ಕೆಲಸ ಮಾಡಿರುವವರನ್ನು ಕರ್ಮಯೋಗಿಗಳೆಂದು ಕರೆಯುವು ದನ್ನು ನೋಡಿದ್ದೇವೆ. ಕೆಲವರು ತಮ್ಮ ಜೀವಮಾನವನ್ನೆಲ್ಲಾ ಕಟ್ಟಡ ಗಳ ನಿರ್ಮಾಣದಲ್ಲೇ ಕಳೆದಿರುವರು, ಪುಸ್ತಕಗಳನ್ನು ಬರೆಯುವು ದರಲ್ಲೇ ತೊಡಗಿರುವರು. ಅವರು ಎಡೆಬಿಡದೆ ಅಪಾರ ಕರ್ಮ ವನ್ನು ಮಾಡಿರುವರು, ನಿಜ. ಆದರೆ ಅವರನ್ನು ಕರ್ಮಯೋಗಿ ಗಳೆಂದು ಕರೆಯಲಾಗುವುದಿಲ್ಲ. ಏಕೆಂದರೆ, ಪ್ರಚಂಡ ಕರ್ಮಿಗಳಾ ದರೂ ಅವರು ಕರ್ಮದಲ್ಲಿ ಆಸಕ್ತರು. ಅಷ್ಟೇ ಅಲ್ಲ, ಅದರಿಂದ ಬರುವ ಕೀರ್ತಿ, ಹಣ ಮುಂತಾದ ಫಲಗಳಿಗೆ ಕೈಯೊಡ್ಡಿರುವರು. ಅವು ಅವರನ್ನು ಕರ್ಮಜಾಲದಲ್ಲಿ ಬಂಧಿಸುವುವು. ಆದ್ದರಿಂದ ಅವರು ಕರ್ಮದಿಂದ ಮುಕ್ತರಾಗುವುದಿಲ್ಲ. ಬಂಧನಕ್ಕೆ ಕಾರಣ ವನ್ನು ತಿಳಿಯದಿದ್ದರೆ ನಮಗೆ ಮುಕ್ತಿಯ ದಾರಿ ದೊರೆಯದು. ಬಂಧನಕ್ಕೆ ಕಾರಣ ಕರ್ಮವಲ್ಲ , ಕರ್ಮಫಲದಲ್ಲಿ ನಮಗಿರುವ ಆಸಕ್ತಿ.

**ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।**
**ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥**

*( ಗೀತೆ: ೩, ೧೯ )*

'ಆದುದರಿಂದ ಅನಾಸಕ್ತನಾಗಿ ಯಾವಾಗಲೂ ಆವಶ್ಯಕವಾದ ಕರ್ಮವನ್ನು ಆಚರಿಸು. ಏಕೆಂದರೆ ಅನಾಸಕ್ತನಾದ ಪುರುಷನು ಕರ್ಮವನ್ನು ಆಚರಿಸುತ್ತಾ (ಮನಶ್ಶುದ್ಧಿಯನ್ನು ಪಡೆದು) ಮೋಕ್ಷ ವನ್ನು ಹೊಂದುತ್ತಾನೆ.'

ಕರ್ಮಯೋಗಿಯೂ ಅದೇ ಕೆಲಸವನ್ನು ಮಾಡುತ್ತಾನೆ. ಆದರೆ ಅವನು ಕರ್ಮ ಮಾಡುವ ದೃಷ್ಟಿಯಲ್ಲಿ ವ್ಯತ್ಯಾಸವಿದೆ. ಅವನು ಕರ್ಮವನ್ನು ಕಷ್ಟಪಟ್ಟು ಶ್ರದ್ಧೆಯಿಂದ ಬಹಳ ಚೆನ್ನಾಗಿ ಮಾಡುತ್ತಾನೆ, ಆದರೆ ಅದರಲ್ಲಿ ಆಸಕ್ತನಾಗಿರುವುದಿಲ್ಲ. ಅಸಕ್ತ ನಾಗಿರುತ್ತಾನೆ. ಯಾವ ಕೆಲಸದಲ್ಲಿ ತನ್ನ ಮನಸ್ಸನ್ನು ಸಂಪೂರ್ಣ ವಾಗಿ ಹಾಕಿರುತ್ತಾನೊ ಆ ಕೆಲಸವನ್ನು ಯಾವುದೇ ಸಮಯ ದಲ್ಲಿ ಬಿಡಲೂ ಸಿದ್ಧನಾಗಿರುತ್ತಾನೆ. ಅಷ್ಟೇ ಅಲ್ಲ. ಅದರಿಂದ ಬರುವ ಫಲಕ್ಕೆ ಅವನು ಕೈಯೊಡ್ಡುವುದಿಲ್ಲ. ಅದನ್ನು ಭಗ ವಂತನಿಗೆ ಅರ್ಪಿಸಿಬಿಡುತ್ತಾನೆ. ಫಲಾಸಕ್ತಿಯ ವಿಷದ ಹಲ್ಲನ್ನು ಕಿತ್ತಿರುವುದರಿಂದ ಕರ್ಮವೆಂಬ ಹಾವಿನೊಡನೆ ಆಟವಾಡಲು ಅವನಿಗೆ ಸಾಧ್ಯ. ಕರ್ಮಫಲ ಅವನನ್ನು ಸಂತೋಷ ದುಃಖ ಗಳಿಂದ ಕುಣಿಸಲು ಸಾಧ್ಯವಿಲ್ಲ.

**ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।**

**ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥**

*(ಗೀತೆ: ೩, ೯)*

'ಯಜ್ಞಕ್ಕಾಗಿ ಮಾಡಿದ ಕರ್ಮವನ್ನು ಬಿಟ್ಟರೆ ಇತರ ಕರ್ಮಗಳಿಂದ ಜನರು ಬಂಧಿಸಲ್ಪಡುತ್ತಾರೆ. ಆದುದರಿಂದ ಎಲೈ ಅರ್ಜುನ, ಆಸಕ್ತಿಯಿಂದ ಮುಕ್ತನಾಗಿ ಯಜ್ಞಕ್ಕೋಸ್ಕರ ಕರ್ಮವನ್ನು ಸರಿಯಾಗಿ ಮಾಡು.'

ಯಜ್ಞಕ್ಕಾಗಿ ಮಾಡಿದ ಕರ್ಮ ಎಂದರೆ ಭಗವದರ್ಪಿತ ವಾಗಲಿ ಎಂದು ಮಾಡಿದ ಕರ್ಮ. ಈ ದೃಷ್ಟಿಯಿಂದ ಮಾಡಿದ ಕರ್ಮ ನಮ್ಮನ್ನು ಬಂಧಿಸುವುದಿಲ್ಲ. ಫಲಾಪೇಕ್ಷೆ ಎನ್ನುವುದು ಒಂದು ಬಗೆಯ ಅಂಟು. ಅದರಿಂದ ಪಾರಾಗಬೇಕಾದರೆ ಕೈಗೆ ಯಜ್ಞದೃಷ್ಟಿಯ ಎಣ್ಣೆಯನ್ನು ಸವರಿಕೊಂಡಿರಬೇಕು. ಹಲ ಸಿನ ಹಣ್ಣನ್ನು ಬಿಡಿಸುವುದಕ್ಕೆ ಮುಂಚೆ ಕೈಗೆ ಎಣ್ಣೆಯನ್ನು ಹಚ್ಚಿಕೊಂಡಿರಬೇಕು. ಇಲ್ಲದಿದ್ದರೆ ಹಣ್ಣನ್ನು ತಿಂದು ಮುಗಿಸಿ ದ್ದರೂ ಅದರ ಅಂಟು ನಮ್ಮನ್ನು ಬಿಟ್ಟಿರುವುದಿಲ್ಲ ಎಂದು ಶ್ರೀರಾಮಕೃಷ್ಣರು ವಿವರಿಸುತ್ತಿದ್ದರು. ಕರ್ಮಯೋಗ ಎಂದರೆ ಅನಾಸಕ್ತಿಯೋಗ. ನಾವು ಅನಾಸಕ್ತಿಯ ತೈಲವನ್ನು ಹಚ್ಚಿ ಕೊಂಡು ನಮ್ಮ ಕರ್ತವ್ಯ ಕರ್ಮಗಳನ್ನು ಮಾಡಬೇಕು. ಇದನ್ನೇ ಕರ್ಮಕೌಶಲ ಎಂದು ಶ್ರೀಕೃಷ್ಣ ಹೇಳಿರುವುದು.

## ಕರ್ಮಫಲಪ್ರದ

ನಾವು ಕರ್ಮವನ್ನು ಮಾಡುತ್ತೇವೆ. ಅದಕ್ಕೆ ಬರಬೇಕಾದ ಫಲದ ಮೇಲೆ ನಮಗೆ ಹತೋಟಿ ಇಲ್ಲ. ಇಬ್ಬರು ಒಂದೇ ಕರ್ಮವನ್ನು ಮಾಡಿದ್ದರೂ ಅವರಿಗೆ ಬೇರೆ ಬೇರೆ ಫಲಗಳು ಸಿಕ್ಕಬಹುದು. ನಮ್ಮ ಕರ್ಮಕ್ಕೆ ಫಲವನ್ನು ಕೊಡುವವನು ಭಗವಂತ. ಅವನು ಕರ್ಮಫಲಪ್ರದ.

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥**

*(ಗೀತೆ: ೨, ೪೭)*

‘ಕರ್ಮ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರ. ಫಲದಲ್ಲಿ ಎಂದಿಗೂ ಆಸಕ್ತನಾಗಬೇಡ. ಕರ್ಮಫಲಕ್ಕೆ ಕಾರಣನಾಗದೇ ಇರು. ಅಕರ್ಮದಲ್ಲಿಯೂ ನಿನಗೆ ಆಸೆ ಹುಟ್ಟದಿರಲಿ.’

ಗೀತೆಯ ಈ ಶ್ಲೋಕ ಬಹಳ ಜನಪ್ರಿಯವಾದುದಾಗಿದೆ. ಅದನ್ನು ಹೇಳುವವರ ಉದ್ದೇಶ ಸಾಮಾನ್ಯವಾಗಿ ಸರಿಯಾದ ಅರ್ಥಕ್ಕೆ ದೂರವಾಗಿರುತ್ತದೆ. ಕರ್ಮ ಮಾಡುವುದಕ್ಕೆ ನಮಗೆ ಅಧಿಕಾರವಿದೆ. ಫಲಕ್ಕೆ ಕಾರಣನಾಗದೇ ಇರು ಎಂದರೆ ಫಲ ಬಾರದ ರೀತಿ ಕೆಲಸ ಮಾಡು ಎಂದಲ್ಲ. ನನ್ನಿಂದ ಆ ಫಲ ಬಂತು. ಅದಕ್ಕೆ ನಾನು ಒಡೆಯ ಎಂದು ಭಾವಿಸಬೇಡ ಎಂದು.

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।**
**ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥**

*(ಗೀತೆ: ೯, ೨೭)*

‘ಎಲೈ ಅರ್ಜುನ, ಯಾವುದನ್ನು ಮಾಡುತ್ತೀಯೊ, ಯಾವುದನ್ನು ಭುಜಿಸುತ್ತೀಯೊ, ಯಾವುದನ್ನು ಹೋಮ ಮಾಡುತ್ತೀಯೊ, ಯಾವುದನ್ನು ದಾನ ಮಾಡುತ್ತೀಯೊ, ಯಾವ ತಪಸ್ಸನ್ನು ಮಾಡುತ್ತೀಯೊ ಅವೆಲ್ಲವನ್ನೂ ನನಗೆ ಸಮರ್ಪಿಸು.’

ನಾವು ಮಾಡುತ್ತಿರುವುದು ಭಗವಂತನ ಕೆಲಸ. ಅದರ ಫಲ ಭಗವಂತನದು. ಆ ಕೆಲಸ ಮಾಡುವುದಕ್ಕೆ ನಾವೆಲ್ಲ ಒಂದು ನಿಮಿತ್ತ ಎಂದು ಭಾವಿಸಿ, ನಮ್ಮ ಎಲ್ಲಾ ಕೆಲಸಗಳನ್ನೂ ಸಮರ್ಪಣ ಭಾವದಿಂದ ಮಾಡಿದರೆ ಕರ್ಮಯೋಗದ ದಾರಿಯಲ್ಲಿ ನಾವು ಸಾಗಿ ಭವಸಾಗರವನ್ನು ದಾಟಿ ಭಗವಂತನನ್ನು ಮುಟ್ಟುವೆವು.

## ಕರ್ಮಯೋಗಿಗಳು

ಆದರ್ಶಗಳನ್ನು ಅನುಷ್ಠಾನ ಮಾಡಿದವರನ್ನು ನೋಡಿದಾಗ ನಮಗೆ ಅದರಲ್ಲಿ ವಿಶ್ವಾಸ ಉಂಟಾಗುವುದು. ಕರ್ಮರಂಗದಲ್ಲಿ ನಿಸ್ವಾರ್ಥ ಕರ್ಮವನ್ನು ಮಾಡಿದವರು ನಮ್ಮ ದೇಶದಲ್ಲಿ ಮತ್ತು ಇತರ ದೇಶಗಳಲ್ಲಿ ಅನೇಕರಿರುವರು. ನಮ್ಮ ದೇಶದಲ್ಲಿ ಇದ್ದವರು, ಎಲ್ಲರಿಗೂ ಪರಿಚಿತರು, ಮಹಾತ್ಮ ಗಾಂಧಿ. ಮೋಹನದಾಸನೆಂಬ ದುರ್ಬಲ ಬಾಲಕ ಸತ್ಯಪ್ರಿಯತೆಯಿಂದಾಗಿ ಪ್ರಾಮಾಣಿಕನಾದ. ವಕೀಲಿ ವೃತ್ತಿಯನ್ನು ಪ್ರಾಮಾಣಿಕವಾಗಿ ಮಾಡಲು ಸಾಧ್ಯವೆಂದು ತೋರಿಸಿದರು. ಅಂದಿನ ಸಾಮಾನ್ಯ ಭಾರತೀಯರಂತೆ ಅವರೂ ಅರೆಬೆತ್ತಲಾದರು. ಆಗ ಇಂಗ್ಲೆಂಡಿನ ಪ್ರಧಾನಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್ ಅವರನ್ನು ಅರೆಬೆತ್ತಲೆ ಫಕೀರನೆಂದು ಕರೆಯುತ್ತಿದ್ದ. ಜನಸೇವೆಯನ್ನು ನಿಸ್ವಾರ್ಥವಾಗಿ ಮಾಡಿ ಪ್ರಚಂಡ ಕರ್ಮದಲ್ಲಿ ತೊಡಗಿ ಜನನಾಯಕರಾಗಿ ಜನತೆಯ ಹೃದಯವನ್ನು ಗೆದ್ದು ಅಹಿಂಸೆಯ ಮಹಾಸ್ತ್ರದಿಂದ ಬ್ರಿಟಿಷರ ಆಡಳಿತವನ್ನು ಕೊನೆಗೊಳಿಸಿದರು.



ಆಗಸ್ಟ್ ೧೫, ೧೯೪೭ ಮಧ್ಯರಾತ್ರಿ ಭಾರತದ ಧ್ವಜವನ್ನು ಹಾರಿಸಿದಾಗ ಅವರು ದೆಹಲಿಯಲ್ಲಿ ಇರಲೇ ಇಲ್ಲ. ಸ್ವಾತಂತ್ರ್ಯಾನಂತರ ಸುಮಾರು ಆರು ತಿಂಗಳು ಬದುಕಿದ್ದರು. ಕರ್ಮಫಲಕ್ಕೆ ಕೈಯೊಡ್ಡಲಿಲ್ಲ. ಕಾಂಗ್ರೆಸ್ ಪಕ್ಷದ ಸಾಧಾರಣ ಸದಸ್ಯರೂ ಆಗಿರಲಿಲ್ಲ. ಪ್ರಾರ್ಥನಾ ಸಮಯದಲ್ಲಿ ‘ಹೇ ರಾಮ್’ ಎನ್ನುತ್ತಾ ಗುಂಡಿನೇಟಿನಿಂದ ಅಸುನೀಗಿದರು. ಕಟ್ಟುನಿಟ್ಟಿನ ಕಾಲನೇಮಿಯೂ ನಿರ್ಮಲ ತ್ಯಾಗಜೀವಿಯೂ ಆಗಿದ್ದ ಇವರ ದರ್ಶನಕ್ಕಾಗಿ, ಸ್ಥಿತಪ್ರಜ್ಞರಂತಿದ್ದ, ಸ್ವಾಮಿ ವಿವೇಕಾನಂದರ ಗುರುಭಾಯಿಗಳಾದ ಸ್ವಾಮಿ ತುರೀಯಾನಂದರು ರಸ್ತೆ ಬದಿಯಲ್ಲಿ ಜನರ ಗುಂಪಿನಲ್ಲಿ ಕಾದು ಕುಳಿತಿದ್ದರು. ‘ನಾಲ್ಕು ಯೋಗಗಳು’ ಎಂಬ ಸರಳ, ಸುಂದರ ಉಪನ್ಯಾಸಗಳ ಪುಸ್ತಕದ ಲೇಖಕರಾದ ಸ್ವಾಮಿ ಜ್ಞಾನೇಶ್ವರಾನಂದರು (೧೮೯೩-೧೯೩೭) ಒಮ್ಮೆ ಗಾಂಧೀಜಿಯವರನ್ನು ನೋಡಲು ಹೋಗಿದ್ದರಂತೆ. ಆಗ ಅವರು ಚರಕದಿಂದ ನೂಲು ತೆಗೆಯುತ್ತಾ ಅವರ ಪತ್ರಿಕೆಯಾದ ‘ಯಂಗ್ ಇಂಡಿಯಾ’ಕ್ಕೆ ಒಂದು ಲೇಖನವನ್ನು ಹೇಳಿ ಬರೆಸುತ್ತಿದ್ದರಂತೆ. ಅದು ಬ್ರಿಟಿಷ್ ಅಧಿಕಾರಿಗಳ ಸವಾಲಿಗೆ ಉತ್ತರವಾಗಿತ್ತಂತೆ. ಅಲ್ಲದೆ ಇನ್ನು ಹತ್ತು ನಿಮಿಷಗಳಲ್ಲಿ ಉಪನ್ಯಾಸಕ್ಕಾಗಿ ರೈಲು ಹಿಡಿಯಬೇಕಾಗಿತ್ತಂತೆ. ಅಚ್ಚುಕಟ್ಟಾಗಿ ಮಾಡುತ್ತಿದ್ದ ಇಷ್ಟು ಕರ್ಮದ ಮಧ್ಯೆಯೂ ಅವರು ಪ್ರಶಾಂತರಾಗಿ, ಸಂತೋಷಚಿತ್ತರಾಗಿ ನಿರಾಬಾಧಿತರಾಗಿದ್ದರಂತೆ. ಅವರೊಬ್ಬ ದೊಡ್ಡ ಕರ್ಮಯೋಗಿ ಎಂದು ಸ್ವಾಮಿಗಳು ಹೇಳುತ್ತಿದ್ದರು.

ಸ್ವಾಮಿ ವಿವೇಕಾನಂದರ ಗುರುಭಾಯಿಗಳಾಗಿದ್ದ ಸ್ವಾಮಿ ಶಾರದಾನಂದರು ಸುಮಾರು ೩೦ ವರ್ಷಗಳ ಕಾಲ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಕಾರ್ಯದರ್ಶಿಯಾಗಿದ್ದರು. ಇದರ ಗುರುತರ ಜವಾಬ್ದಾರಿಯ ಜತೆಗೆ ಶ್ರೀಶಾರದಾದೇವಿಯವರ ಮತ್ತು ಅವರ ಸಂಗಡಿಗರ ಆವಶ್ಯಕತೆಗಳನ್ನು ಕಲ್ಕತ್ತೆಯಲ್ಲಿಯೂ ಮತ್ತು ಜಯರಾಂಬಾಟಿ ಹಳ್ಳಿಯಲ್ಲಿಯೂ

ಎಡೆಬಿಡದೆ ನೋಡಿ ಕೊಳ್ಳುತ್ತಿದ್ದರು. ಅಲ್ಲದೆ 'ಉದ್ಬೋಧನ' ಪತ್ರಿಕೆ ಹಾಗೂ ಪುಸ್ತಕ ಪ್ರಕಾಶನದ ಜವಾಬ್ದಾರಿ ಇವರ ಮೇಲೆಯೇ ಬಿದ್ದಿತ್ತು. ಇದರ ಮಧ್ಯೆ ಶ್ರೀಶಾರದಾದೇವಿಯವರು ಕಲ್ಕತ್ತೆಯಲ್ಲಿ ವಾಸವಿರುವು ದಕ್ಕಾಗಿ ನಿವೇಶನವನ್ನು ಖರೀದಿಸಿ ಒಂದು ಮನೆ ಕಟ್ಟಿಸಿದರು. ಹೋಗುತ್ತಾ ಬರುತ್ತಾ ಇದ್ದ ಜನಜಂಗುಳಿಯಲ್ಲಿ ಕುಳಿತು ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ಬರೆದು ಪ್ರಕಟಿಸಿದರು. ಸ್ವಾಮಿ ವಿವೇಕಾನಂದರ ಆಜ್ಞಾನುಸಾರ ಎರಡು ವರ್ಷಗಳ ಕಾಲ ಅಮೆರಿಕಾ ಮತ್ತು ಇಂಗ್ಲೆಂಡಿನಲ್ಲಿ ಉಪನ್ಯಾಸ ಮತ್ತು ಉಪದೇಶಗಳ ಮೂಲಕ ವೇದಾಂತದ ಪ್ರಚಾರ ಕಾರ್ಯ ಮಾಡಿದರು. ಅಲ್ಲದೆ, ನೆರವು ಮತ್ತು ಮಾರ್ಗ ದರ್ಶನಕ್ಕಾಗಿ ಇವರ ಬಳಿಗೆ ಭಕ್ತರು ಮತ್ತು ಸಂನ್ಯಾಸಿಗಳು ಬರುತ್ತಿದ್ದರು. ಅವರ ಸಹಾಯ ಮತ್ತು ಸಾಂತ್ವನಕ್ಕೆ ಇವರ ಹೃದಯದ ಬಾಗಿಲು ಸದಾ ತೆರೆದಿರುತ್ತಿತ್ತು. ಇಂತಹ ಪ್ರಚಂಡ ಕರ್ಮದ ಮಧ್ಯೆಯೂ ಸ್ವಾಮಿಗಳು ಪ್ರಶಾಂತ ಚಿತ್ತರಾಗಿ ಅನಾಸಕ್ತರಾಗಿ ಅಕರ್ತರಂತೆ ಇರುತ್ತಿದ್ದರು. ಇವರ ಸೇವೆ ಮತ್ತು ಸಂಗದಲ್ಲಿದ್ದ ಸ್ವಾಮಿ ನಿಖಿಲಾನಂದರು (೧೮೯೫– ೧೯೭೩) ಇವರನ್ನು ಕುರಿತು ಚಿಂತಿಸಿದಾಗಲೆಲ್ಲ ಭಗವದ್ಗೀತೆಯ ಈ ಶ್ಲೋಕ ತಮಗೆ ನೆನಪಾಗುವುದು ಎಂದು ಅವರ ಸ್ಮರಣ ಲೇಖನದಲ್ಲಿ ಬರೆದಿದ್ದಾರೆ.

**ಆಪೂರ್ಯಮಾಣಮಚಲಪ್ರತಿಷ್ಠಂ**
**ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।**
**ತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ**
**ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥** *(ಗೀತೆ, ೨, ೭೦)*



'ಪೂರ್ಣವಾಗಿಯೂ ಅಚಲವಾಗಿಯೂ ಇರುವ ಸಮುದ್ರವನ್ನು ನದಿಗಳ ನೀರು ಹೇಗೆ ಪ್ರವೇಶಿಸುವುವೊ ಹಾಗೆ ಎಲ್ಲಾ ಬಯಕೆಗಳು ಯಾವನನ್ನು ಪ್ರವೇಶಿಸುವುವೊ, ಅವನು ಶಾಂತಿಯನ್ನು ಹೊಂದುತ್ತಾನೆ; ಕಾಮನೆಗಳನ್ನು ಬಯಸುವವನು ಹೊಂದಲಾರನು.'

## ಯುಗಧರ್ಮ

ನಮ್ಮ ದೇಶ ಧರ್ಮ, ವಿಜ್ಞಾನ, ಸಂಸ್ಕೃತಿಗಳಲ್ಲಿ ಪುರಾತನ ದೇಶಗಳಲ್ಲಿ ಪುರಾತನ. ಆದರೆ, ರಾಜಕೀಯ ಸ್ವಾತಂತ್ರ್ಯದ ದೃಷ್ಟಿಯಿಂದ, ಒಂದು ಸಾವಿರ ವರ್ಷಗಳ ದಾಸ್ಯದಿಂದ ಹೊರಬಂದು ಸ್ವಾತಂತ್ರ್ಯವನ್ನು ಚಪ್ಪರಿಸುತ್ತಿರುವ ನವಜಾತ ಶಿಶು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ೫೦ ವರ್ಷಗಳಿಗೂ ಮೊದಲೇ ಭಾರತದ ಪುನರುತ್ಥಾನವಾಗಲಿದೆ ಮತ್ತು ಅದನ್ನು ತಡೆಯಲು ಯಾರಿಂದಲೂ ಸಾಧ್ಯವಾಗದು ಎಂಬ ತೂರ್ಯವಾಣಿಯನ್ನು ಸ್ವಾಮಿ ವಿವೇಕಾನಂದರು ಮೊಳಗಿಸಿದರು. ಜತೆಗೆ, ಅಂದಿನವರೆಗೆ ನಮ್ಮ ಹಿನ್ನಡೆಗೆ ಕಾರಣವಾಗಿದ್ದ ಅಂಶಗಳನ್ನು ವಿವರವಾಗಿ, ಸ್ಪಷ್ಟವಾಗಿ, ನಿರ್ದಾಕ್ಷಿಣ್ಯವಾಗಿ ಮತ್ತು ಬಹಿರಂಗವಾಗಿ ವಿಶ್ಲೇಷಿಸಿದುದಲ್ಲದೆ, ಇನ್ನು ಮುಂದೆ ಅನುಸರಿಸಬೇಕಾದ ಧರ್ಮ ಮತ್ತು ಕರ್ಮದ ಮಾರ್ಗವನ್ನು ವಿಶದವಾಗಿ ಬಿಡಿಸಿಟ್ಟರು. ಆಚಾರ್ಯರು ಎಂದರೆ, ನುಡಿ ದಂತೆ ನಡೆದು ಸಮಾಜಕ್ಕೆ ಮಾರ್ಗದರ್ಶನ ಮಾಡುವವರು. ಕಾಲ ಕಾಲಕ್ಕೆ ಆಚಾರ್ಯರು ಭಾರತದಲ್ಲಿ ಅವತರಿಸಿ ತಮ್ಮ ಕೆಲಸ ಮಾಡಿಹೋಗಿರುವರು. ಸ್ವಾಮಿ ವಿವೇಕಾನಂದರು ನವಯುಗದ ಆಚಾರ್ಯರು ಹಾಗೂ ಯುಗಪ್ರವರ್ತಕರು. ಅವರ ವ್ಯಕ್ತಿತ್ವ ಮತ್ತು ಬೋಧನೆಗಳು ಭಾರತಕ್ಕೆ ಸೀಮಿತವಲ್ಲ. ವೇದಾಂತ ವಿಶ್ವಧರ್ಮವೆಂಬ ಸಂದೇಶವನ್ನು ಪಾಶ್ಚಾತ್ಯರ ಮುಂದಿಟ್ಟರು. ಭಾರತೀಯರಿಗೆ ಕರ್ಮಯೋಗವನ್ನು ಯುಗಧರ್ಮವೆಂದು ಬೋಧಿಸಿರುವರು. ಅವರು ಪ್ರಾರಂಭಿಸಿದ ಶ್ರೀರಾಮಕೃಷ್ಣ ಸಂನ್ಯಾಸಿ–ಸಂಘಕ್ಕೆ ವೇದಾಂತ ಮತ್ತು ಕರ್ಮಯೋಗಗಳಿಗೆ ಅಸ್ತಿಭಾರವಾದ ತ್ಯಾಗ ಮತ್ತು ಸೇವೆಯ ಆದರ್ಶಗಳೊಂದಿಗೆ ಅನುಷ್ಠಾನ ವೇದಾಂತವನ್ನು ವಿಧಿಸಿದರು. ಮೊದಲು ಭಾರತೀಯರು ತಮೋನಿದ್ರೆಯಿಂದ ಏಳಬೇಕು. ಎದ್ದು ಕೆಲಸ ಮಾಡಿ ರಾಜಸಿಕರಾಗಿ ದಾಸ್ಯಶೃಂಖಲೆಯಿಂದ ಪಾರಾಗಬೇಕು. ನಂತರ ಅವರು ಸಾತ್ವಿಕರಾಗಿ ಕರ್ಮಯೋಗದ ಗುರಿ ಮುಟ್ಟುವರು ಎಂಬುದು ಅವರ ದೀರ್ಘಕಾಲದ ಭವಿಷ್ಯವಾಣಿ. ಈಗ ಭಾರತ ಎಚ್ಚೆತ್ತು ಕಾರ್ಯೋನ್ಮುಖವಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅವರು ತೋರಿರುವ ದಾರಿಯಲ್ಲಿ ಸಹಸ್ರಾರು ವರ್ಷಗಳು ಭಾರತೀಯರು ಮುನ್ನಡೆಯಬೇಕಾಗಿದೆ. ಇದನ್ನು ಸಂದೇಹಪಡುವಂತಿಲ್ಲ, ಇದರಿಂದ ಹಿಂಜರಿಯುವಂತಿಲ್ಲ, ಮುಂದಕ್ಕೆ ಹೋಗಬೇಕಾಗಿದೆ. ಏಕೆಂದರೆ ಭಾರತೀಯರಿಗೆ ಕರ್ಮಯೋಗವನ್ನು ಯುಗಧರ್ಮವನ್ನಾಗಿ ವಿಧಿಸಿರುವವರು ಆದರ್ಶ ಕರ್ಮಯೋಗಿಗಳೂ ಯುಗ ಪ್ರವರ್ತಕರೂ ಆದ ಸ್ವಾಮಿ ವಿವೇಕಾನಂದರು. ಈ ಲೇಖನದಲ್ಲಿ ಪ್ರಾರಂಭದಿಂದ ಕೊನೆಯವರೆಗೆ ಪ್ರಸ್ತಾಪಿಸಿರುವ ಭಾವನೆಗಳೆಲ್ಲ ಅವರ 'ಕರ್ಮಯೋಗ' ಮತ್ತು 'ಗೀತಾಪ್ರವಚನ' ಎಂಬ ಪ್ರವಚನ ಗುಚ್ಛಗಳಿಂದ ಆಯ್ದವುಗಳಾಗಿವೆ.